PW-1

<u>ದಿನಾಂಕಃ **05.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲುಃ 1 ರಿಂದ 3 ಪ್ರತಿವಾದಿ ಪರ ಶ್ರೀ ಡಿ ಸಿ ಆರ್ ವಕೀಲರಿಂದಃ</u>**

1996 ರನೆ ಇಸವಿಯಲ್ಲಿ ನಿಮ್ಮ ತಂದೆಯವರು ಕಾಲವಾಧ ನಂತರ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಅವಶ್ಯಕತೆ ಬಿದ್ದರೆ ಹಾಜರು ಪಡಿಸಿಸುತ್ತೇನೆ. ನೀವು ಹಾಜರು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಹೌದು. ನೀವು ವಾದ ಪತ್ರದ ಪ್ಯಾರಾ 5 ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 4 ರಲ್ಲಿ ಹೇಳಿರುವಂತೆ ದಿಃ 15.04.2014 ರಂದು 1 ಲಕ್ಷ, ದಿಃ 03.12.2014 ರಂದು 3 ಲಕ್ಷ, ದಿಃ 25.01.2015 ರಂದು ರೂ 50,000/-, ದಿಃ 21.05.2015 ರಂದು 3 ಲಕ್ಷ ಒಟ್ಟು ರೂ 7,50,000/- ಗಳನ್ನು ಪ್ರತಿವಾದಿಗೆ ನೀಡಿರುವ ಬಗ್ಗೆ ಯಾವುದಾದರೂ ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಹೌದು. ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಶಾನೆ ಪಿ ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿ ಇಲ್ಲ, ಸಾಕ್ಷಿ ಮುಂದುವರೆದು ನಾನು ನಮ್ಮ ವಕೀಲರಿಗೆ ಕೊಟ್ಟಿದ್ದೆ ಅವರು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿಮ್ಮ ವಕೀಲರು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಬಗ್ಗೆ ಅವರನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ಈ ಮೇಲೆ ಹೇಳಿರುವ ದಿನಾಂಕಗಳಲ್ಲಿ ನೀವು 1 ನೆ ಪ್ರತಿವಾದಿಗೆ ಹಣ ನೀಡಿಲ್ಲ, ಆದ ಕಾರಣ ನಿಮ್ಮ ಬಳಿ

ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹತ್ತಿರ ಸಂಬಂಧಿ ಇದ್ದ ಕಾರಣ MOU ಮಾಡಸಿದ್ದೇವು. ನೀವು 1 ನೆ ಪ್ರತಿವಾದಿ ಹತ್ತಿರ ಚೀಟಿ ಹಣ ಕಟ್ಟುತ್ತಿದ್ದೆ ಎಂದು ಹೇಳಿದ್ದೀರಿ ಅವರು ಚೀಟಿ ವ್ಯವಹಾರ ನಡೆಸುತ್ತಿದ್ದ ಬಗ್ಗೆ ಯಾವುದಾದರೂ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಅವರು ಪ್ರತಿಗಳು ಚೀಟಿ ಹಣ ಪಡೆದುಕೊಂಡಾಗ ನಮಗೆ ಬರೆದುಕೊಡುತ್ತಿದ್ದರು. ಆ ರೀತಿ ಬರೆದುಕೊಡುತ್ತಿದ್ದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. 2 ಮತ್ತು 3 ನೆ ಪ್ರತಿವಾದಿಯ ಜೊತೆಯಲ್ಲಿ ನೀವು ಹಣದ ವ್ಯವಹಾರ ಮಾಡಿದ್ದೀರಾ ಎಂದರೆ ಹೌದು. ಆ ವಿಚಾರವನ್ನು ಸಾಬೀತು ಪಡಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ನೀವು ಗೃಹಿಣಿ ಆಗಿದ್ದರಿಂದ ನಿಮ್ಮ ಲಕ್ಷಗಟ್ಟಲೆ ಹಣ ಇರುವುದಿಲ್ಲ, ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು 1 ನೆ ಪ್ರತಿವಾದಿಗೆ ತಿಳುವಳಿಕೆ ನೋಟಿಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಅಂಚೆ ಸ್ವೀಕೃತಿ ಪತ್ರದಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಅದರಲ್ಲಿ ಯಾರು ನೋಟಿಸ್ ನ್ನು ಪಡೆದುಕೊಂಡು ಸಹಿ ಮಾಡಿದ್ದಾರೆ ಎಂದರೆ ವಸಂತಾ ರವರು ಸಹಿ ಮಾಡಿದ್ದಾರೆ ಅವರು 1 ನೆ ಪ್ರತಿವಾದಿಯ ಸ್ನೇಹಿತೆ. ನಿಪಿ-4 ಅಂಚೆ ಸ್ವೀಕೃತಿ ಪತ್ರ ವನ್ನು ಪಡೆದುಕೊಂಡ ವಸಂತಾ ರವರಿಗೂ ಮತ್ತು 1 ನೆ ಪ್ರತಿವಾದಿಗೆ ಯಾವುದೆ ಸಂಬಂಧ ಇಲ್ಲ ಅವರು 1 ನೆ ಪ್ರತಿವಾದಿಯ ಸ್ನೇಹಿತರಲ್ಲ ಎಂದರೆ ಅವರ ಸಂಬಂಧಿ. ದಾವೆಯಲ್ಲಿ ಹೇಳಿರುವ ರೀತಿ ನೀವು ಯಾವುದೆ ಹಣವನ್ನು ಪ್ರತಿವಾದಿಗಳಿಗೆ ನೀಡದೆ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 1 ನೆ ಪ್ರತಿವಾದಿ ಮತ್ತು ನಿಮಗೆ

PW-1

ಮನಸ್ತಾಪ ಇದ್ದಕಾರಣ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಧನಲಕ್ಷ್ಮಿಯವರು ನಿಮ್ಮಿಂದ ಯಾವುದೇ ದಿನಾಂಕದಂದು ಯಾವುದೆ ಹಣವನ್ನು ಪಡೆದುಕೊಂಡಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.